**<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**

**<u>Spl.C.181/2017</u>**

ದಿನಾಂಕ 08.01.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 38 ಪ್ರಾಸಾ - 16

| | | |
|---|---|---|
| ಹೆಸರು | ಃ | ಗಜೇಂದ್ರ ಕುಮಾರ್ ಎಸ್ |
| ತಂದೆಯ ಹೆಸರು | ಃ | ಸಂಜೀವಯ್ಯ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಮುಖ್ಯಪೇದೆ 290, ಮಾಗಡಿ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಮಾಗಡಿ |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

2014 ರಿಂದ 2019 ರ ಆಗಸ್ಟ್ ತಿಂಗಳವರೆಗೆ ನಾನು ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 04.10.2017 ರಂದು 4 ವಸ್ತುಗಳನ್ನು ಎಫ್.ಎಸ್.ಎಲ್. ಮಡಿವಾಳ ಬೆಂಗಳೂರಿಗೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ಅವರು ಹಿಂಬರಹವನ್ನು ನೀಡಿದ್ದು, ಅದನ್ನು ತಂದು ಠಾಣಾಧಿಕಾರಿಯವರಿಗೆ ಒಪ್ಪಿಸಿರುತ್ತೇನೆ. ಸದರಿ ಹಿಂಬರಹವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 24 ಎಂದು ಗುರುತಿಸಲಾಯಿತು.

3. ದಿನಾಂಕ 11.10.2017 ರಂದು 7 ವಸ್ತುಗಳನ್ನು ಆರ್.ಎಫ್.ಎಸ್.ಎಲ್. ಮೈಸೂರು ಕಛೇರಿಗೆ ತೆಗೆದುಕೊಂಡು ಹೋಗಿ ಕೊಟ್ಟಿದ್ದು, ಅದಕ್ಕೆ ಸಂಬಂಧಿಸಿದಂತೆ ಹಿಂಬರಹವನ್ನು ಠಾಣಾಧಿಕಾರಿಯವರಿಗೆ ಒಪ್ಪಿಸಿರುತ್ತೇನೆ. ಸದರಿ ಹಿಂಬರಹವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ 25 ಎಂದು ಗುರುತಿಸಲಾಯಿತು. ಆರ್.ಎಫ್.ಎಸ್.ಎಲ್.

ಮೈಸೂರಿಗೆ ಒಪ್ಪಿಸಿರುವ ವಸ್ತುಗಳನ್ನು ಮುದ್ದೆಮಾಲು 1 ರಿಂದ 7 ಎಂದು ಈಗಾಗಲೇ ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಶ್ರೀ.ಟಿ.ಜಿ., ವಕೀಲರಿಂದ 2ನೇ ಆರೋಪಿ ಪರವಾಗಿಃ</u>**

4. ಮುದ್ದೆಮಾಲು 1 ಕಲ್ಲು ನನ್ನ ವಶಕ್ಕೆ ಕೊಡುವಾಗ ಪ್ಯಾಕ್ ಮಾಡಿ ಸೀಲ್ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುವನ್ನು ಎಫ್.ಎಸ್.ಎಲ್. ಮಡಿವಾಳ ಬೆಂಗಳೂರಿಗೆ ಮತ್ತು ಆರ್.ಎಫ್.ಎಸ್.ಎಲ್. ಮೈಸೂರು ಕಛೇರಿಗೆ ತೆಗೆದುಕೊಂಡು ಹೋಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು 1 ಕ್ಕೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ, ಅದನ್ನು ನಾವೇ ಸೃಷ್ಟಿಸಿ ಪರೀಕ್ಷೆಗೆ ಕೊಡಲಾಗಿದೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1ನೇ ಮತ್ತು 3ನೇ ಆರೋಪಿ ಪರ ವಕೀಲರಿಂದಃ 2ನೇ ಆರೋಪಿ ಪರವಾಗಿ ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅನುಮತಿಸಲಾಗಿದೆ.</u>**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**